# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 406 |
| **ಮಾನ್ಯ ಸದಸ್ಯರ ಹೆಸರು** | : | ಡಾ: ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | 29-01-2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಾಗಾವಿ ಪ್ರಾಚೀನ ಕಾಲದ ವಿಶ್ವವಿದ್ಯಾಲಯವಾಗಿದ್ದು, ಪ್ರಸ್ತುತ ನಾಗಾವಿಯಲ್ಲಿರುವ ಸ್ಮಾರಕಗಳು ಸಂರಕ್ಷಣೆ ಇಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಬಂದಿದೆ. |
| ಆ) | ನಾಗಾವಿಯ ವಿಶ್ವವಿದ್ಯಾಲಯವಿದ್ದ ಜಮೀನು ಅತಿಕ್ರಮಣವಾಗುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; | ನಾಗಾವಿ ಪಾರಂಪರಿಕ ಪ್ರದೇಶದ ಎಲ್ಲೆ ಗುರುತಿಸಿ ಕೊಡಲು ತಹಸೀಲ್ದಾರ್, ಚಿತ್ತಾಪೂರ, ಕಲಬುರಗಿ ಜಿಲ್ಲೆ ಇವರಿಗೆ ಸೂಚಿಸಲಾಗಿದೆ. |
| ಇ) | ನಾಗಾವಿಯಲ್ಲಿ ಪುರಾತತ್ವ ಇಲಾಖೆ ಪ್ರಕಾರ ಮಸೀದಿ ಎಲ್ಲಿ ಬರುತ್ತದೆ: (ಮಸೀದಿಯ ಒಟ್ಟು ಸುತ್ತಳತೆ ಮತ್ತು ಪೋಟೋಗ್ರಫಿ ಒದಗಿಸುವುದು) | ನಾಗಾವಿ ಪಾರಂಪರಿಕ ಪ್ರದೇಶದಲ್ಲಿ ಅನೇಕ ಸ್ಮಾರಕಗಳಿದ್ದು, ಸದರಿ ಸ್ಮಾರಕದ ನಂದೇಶ್ವರ ಗುಡಿಯ ಬಲ ಭಾಗದಲ್ಲಿ ಕರಿ /ಕಾಲೀಯ ಮಸೀದಿ ಇದೆ. ಫೋಟೋ ಅನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಈ) | ನಾಗಾವಿಯ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರ ಮತ್ತು ಇಲಾಖೆ ಕೈಗೊಂಡ ಯೋಜನೆಗಳೇನು; (ಪೂರ್ಣ ಯೋಜನೆಯ ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ನಾಗಾವಿ ಪಾರಂಪರಿಕ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ, ಡ್ರೋನ್ ಸರ್ವೇ ಮತ್ತು ಮ್ಯಾಪಿಂಗ್ ಕಾಮಗಾರಿಯನ್ನು ರೂ.14.00 ಲಕ್ಷಗಳಲ್ಲಿ ಕೈಗೊಳ್ಳಲಾಗಿದೆ.<br><br>2024-25ನೇ ಸಾಲಿನ ಇಲಾಖೆಯ ಕ್ರಿಯಾಯೋಜನೆಯಲ್ಲಿ ರೂ.100.00ಲಕ್ಷಗಳನ್ನು ನಿಗದಿಪಡಿಸಿಕೊಂಡಿದ್ದು, ನಾಗಾವಿಯ ಪ್ರದೇಶದಲ್ಲಿ ತುಂಬಾ ಶಿಥಿಲಾವಸ್ಥೆಯಲ್ಲಿದ್ದ ಕರಿ ಮಸೀದಿ ಸ್ಮಾರಕದ ಜೀರ್ಣೋದ್ಧಾರದ ಸಂರಕ್ಷಣಾ ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.<br><br>ದಿನಾಂಕ:17-09-2024ರಲ್ಲಿ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಾಗಾವಿಯ ಸಮಗ್ರ ಅಭಿವೃದ್ಧಿಯನ್ನು ಕಾರ್ಯವನ್ನು ರೂ.68.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಿದ್ದು, ಒಟ್ಟಾರೆ ಅನುದಾನದ 1/3 ಭಾಗವನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಮಂಡಳಿ ವತಿಯಿಂದ ಹಾಗೂ 2/3 ಭಾಗವನ್ನು ಸರ್ಕಾರದ ವತಿಯಿಂದ ಒದಗಿಸಲು ಅನುಮತಿಸಿದೆ. |


| | | | |
|---|---|---|---|
| | | | ಸರ್ಕಾರದ ಆದೇಶ ಸಂಖ್ಯೆ ಟಿಒಆರ್ 108 ಟಿಡಿವಿ 2024, ದಿನಾಂಕ:25.10.2024 ರಲ್ಲಿ ಕರ್ನಾಟಕದ ಮೊದಲ ವಿಶ್ವವಿದ್ಯಾಲಯವೆಂದು ಪರಿಗಣಿಸಲಾಗುವ ನಾಗಾವಿ ಪಾರಂಪರಿಕ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಲಾಗಿದೆ.<br><br>ನಾಗಾವಿ ಸಮಗ್ರ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್‌ನ್ನು ಸಿದ್ಧಪಡಿಸುವ ಕಾಮಗಾರಿಗಾಗಿ ರೂ.39.67ಲಕ್ಷಗಳ ಅನುದಾನವನ್ನು ನಿಗದಿಪಡಿಸಿಕೊಂಡಿದ್ದು, ಈಗಾಗಲೇ ಕಾರ್ಯಾದೇಶ ನೀಡಲಾಗಿದ್ದು, ಮಾಸ್ಟರ್ ಪ್ಲಾನ್‌ನ್ನು ಸಿದ್ಧಪಡಿಸುವ ಕಾರ್ಯವು ಅಂತಿಮ ಹಂತದಲ್ಲಿದೆ.<br><br>ನಾಗಾವಿ ಪಾರಂಪರಿಕ ಪ್ರದೇಶದಲ್ಲಿರುವ ಯಲ್ಲಮ್ಮ ಗುಡಿ, 60 ಕಂಬದ ಗುಡಿ, ನಂದೇಶ್ವರ ದೇವಾಲಯ ಸಂಕೀರ್ಣ, ಕರಿಮಸೀದಿ ಹಾಗೂ ಶ್ರೀ ಸಂಜೀವಿನಿ ಆಂಜನೇಯ ದೇವಾಲಯಗಳ ಸಂರಕ್ಷಣಾ ಕಾಮಗಾರಿಗಾಗಿ ರೂ.625.00 ಲಕ್ಷಗಳ ಅಂದಾಜಿಗೆ ಕೆ.ಕೆ.ಆರ್.ಡಿ.ಬಿ ಇಂದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, 40% ಅನುದಾನವನ್ನು ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ. ಈ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಕರೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| | ಉ) | ನಾಗಾವಿಯಲ್ಲಿ ಪುರಾತತ್ವ ಇಲಾಖೆ ಪ್ರಕಾರ ವಕ್ಫ್‌ಗೆ ಸಂಬಂಧಿಸಿದ ಆಸ್ತಿ ಇದೆಯೇ; ಇದ್ದರೆ ಮಾಹಿತಿ ನೀಡುವುದು? | ವಕ್ಫ್‌ಗೆ ಸಂಬಂಧಿಸಿದ ಯಾವುದೇ ಆಸ್ತಿ ಇರುವುದಿಲ್ಲ. |

TOR 26 TDV 2026

(ಎಚ್.ಕೆ. ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಾಖಲೆಗಳು ಇರುವುದಿಲ್ಲ








S
D·31

